

# ಸಲ್ಲೂ-ಕತ್ರೀನಾ ಜೋಡಿ

ಕತ್ರೀನಾ ಕೈಫ್ ಕುರಿತ ಸಲ್ಲೂ ಭಾಯಿಯ ಮಮಕಾರ ಈಗಲೂ ಮುಂದುವರಿದಿದೆ. 'ಭಾರತ್' ಸಿನಿಮಾದ ಪ್ರಮೋಷನ್ ಗೋಷ್ಠಿಯಲ್ಲಿ ಸಲ್ಮಾನ್ ಖಾನ್ ಎಲ್ಲರ ಎದುರಿಗೇ ಕತ್ರೀನಾಳನ್ನು ಬಾಯ್ತುಂಬ ಹೊಗಳಿದ್ದು ನೋಡಿದರೆ ಮುಂದಿನ ನಾಲ್ಕೈದು ಚಿತ್ರಗಳಲ್ಲೂ ಸಲ್ಲೂಗೆ ಕತ್ರೀನಾಳೇ ನಾಯಕಿ ಅನ್ನುವಂತಿದೆ. ಹಾಗೆಂದು 'ಭಾರತ್' ಚಿತ್ರಕ್ಕೆ ಕತ್ರೀನಾ ಮೊದಲ ಆಯ್ಕೆ ಆಗಿರಲಿಲ್ಲ. ಪ್ರಿಯಾಂಕಾ ಚೋಪ್ರಾ ನಾಯಕಿ ಎಂದು ಊರೆಲ್ಲಾ ಡಣಾಡಂಗುರವಾದ ಬಳಿಕ ಕೊನೆಯ ಕ್ಷಣದಲ್ಲಿ ಮದುವೆಯ ನೆಪ ಹೇಳಿ ಆಕೆ ಹಿಂದಕ್ಕೆ ಸರಿದಳು. ಆ ಬಳಿಕ ಕತ್ರೀನಾ ನಾಯಕಿಯಾಗಿ ಆಯ್ಕೆಯಾದದ್ದು. 'ಪ್ರಿಯಾಂಕಾ ನಮಗೆ ಹೆಚ್ಚು ಸಮಯ ಕೊಡಲೇ ಇಲ್ಲ. ಇನ್ನೇನು ಶೂಟಿಂಗ್ ಆರಂಭಕ್ಕೆ ಎರಡು ವಾರ ಅನ್ನುವಾಗ ಕತ್ರೀನಾಗೆ ಪಾತ್ರ ನೀಡಿದ್ದು. ಆದರೆ ಅಷ್ಟೇ ಸಣ್ಣ ಅವಧಿಯಲ್ಲಿ ಆಕೆ ಅತ್ಯುತ್ತಮವಾಗಿ ಹೊಂದಿಕೊಂಡಿದ್ದಾಳೆ' ಎನ್ನುವುದು ಸಲ್ಮಾನ್‌ನ ಹೊಗಳಿಕೆ. ಅಷ್ಟಕ್ಕೇ ಮಾತು ನಿಲ್ಲಿಸದ ಸಲ್ಮಾನ್, 'ಶೂಟಿಂಗ್‌ನಲ್ಲಿ ಕತ್ರೀನಾ ತೊಡಗಿಸಿಕೊಳ್ಳುವಿಕೆ ನಿಜಕ್ಕೂ ಅದ್ಭುತವಾಗಿತ್ತು' ಎಂದಿದ್ದಾನೆ.

ಪ್ರಿಯಾಂಕಾ ಈ ಪಾತ್ರವನ್ನು ನಿರಾಕರಿಸಿದ್ದಕ್ಕೆ ಆಕೆಯ ಮದುವೆ ಫಿಕ್ಸ್ ಆದದ್ದು ನಿಜವಾದ ಕಾರಣವಲ್ಲ ಎನ್ನುವುದು ಸಲ್ಮಾನ್ ಅನುಮಾನವಂತೆ. ಏಕೆಂದರೆ 'ಭಾರತ್' ಪಾತ್ರ ನಿರಾಕರಿಸಿದ ಬೆನ್ನಲ್ಲೇ ಆಕೆ ಕ್ರಿಸ್ ಪ್ರಾಟ್ ಜೊತೆಗೆ 'ಕೌಬಾಯ್ ನಿಂಜಾ ವೈಕಿಂಗ್' ಸಹಿ ಹಾಕಿದ್ದಾಳೆ. ಬಳಿಕ ಆ ಸಿನಿಮಾ ಯಾಕೋ ಶುರುವಾಗಲಿಲ್ಲ. ಆಗಲೇ ಪ್ರಿಯಾಂಕಾ ಬಗ್ಗೆ ಸಲ್ಲೂ ಸ್ವಲ್ಪ ವ್ಯಂಗ್ಯವಾಗಿ ಮಾತನಾಡಿದ್ದೂ ಸುದ್ದಿಯಾಗಿತ್ತು. 'ಮದುವೆಯೋ, ಇಲ್ಲಿಯ ಸಿನಿಮಾನೋ ಅಥವಾ ಬಾಲಿವುಡ್‌ನ ದೊಡ್ಡ ನಟರ ಜೊತೆಗೆ ನಟಿಸುವುದೋ ನಿರ್ಧಾರ ಆಕೆಗೇ ಬಿಟ್ಟದ್ದು. ಹಾಲಿವುಡ್‌ನಲ್ಲಿ ಟಿವಿಯಲ್ಲಿ ನಟಿಸಿದರೂ ಅದರಿಂದ ದೇಶಕ್ಕೇ ದೊಡ್ಡ ಹೆಸರು ಬಂದಿಲ್ಲವೇ?' ಎಂದು ಸಲ್ಲೂ ಆಗ ಹೇಳಿದ್ದರು.

'ಭಾರತ್' ಸಿನಿಮಾದಲ್ಲಿ ಕತ್ರೀನಾ ಸಾಕಷ್ಟು ಶ್ರಮಪಟ್ಟು ನಟಿಸಿದ್ದಾರೆ ಎಂದು ನಿರ್ದೇಶಕ ಅಲಿ ಅಬ್ಬಾಸ್ ಜಾಫರ್ ಕೂಡಾ ಹೊಗಳಿದ್ದು ವಿಶೇಷ. ಬಹುತೇಕ ಆ್ಯಕ್ಷನ್ ಚಿತ್ರಗಳಲ್ಲಿ ಸಲ್ಲೂ ಜೊತೆಗೆ ನಾಯಕಿಯಾಗಿ ಈಗಾಗಲೆ ಯಶಸ್ವಿಯಾಗಿರುವ ಕತ್ರೀನಾ, ಸದ್ಯಕ್ಕಂತೂ ಸಲ್ಮಾನ್‌ಗೆ ಪರ್ಫೆಕ್ಟ್ ಜೋಡಿ ಎಂದು ಬಾಲಿವುಡ್ ಕೊಂಡಾಡುತ್ತಿದೆ. ■

# ಕರೀನಾ ಕಮ್‌ಬ್ಯಾಕ್

ಕರೀನಾ ಕಪೂರ್ ಮತ್ತೆ ಬಾಲಿವುಡ್‌ನಲ್ಲಿ ಬ್ಯುಸಿ ನಟಿಯಾಗಿದ್ದಾಳೆ. ಮದುವೆ ಮತ್ತು ಮಗುವಾದ ಬಳಿಕ ತಾರೆಯರ ಬೇಡಿಕೆ ಕಡಿಮೆಯಾಗುತ್ತದೆ ಎನ್ನುವುದು ಸುಳ್ಳು ಎನ್ನುವುದನ್ನೂ ಕರೀನಾ ಸಾಬೀತುಪಡಿಸಿದ್ದಾಳೆ. ಅಭಿನಯ ಮಾತ್ರವಲ್ಲ, ತನ್ನ ಬಳುಕುವ ಬಳ್ಳಿಯಂತಹ ಮೈಮಾಟದ ಮೂಲಕವೂ ಪ್ರೇಕ್ಷಕರ ಗಮನ ಸೆಳೆದ ನಟಿಯೀಕೆ. ಮದುವೆಯಾದ ಬಳಿಕ ಬೇಡಿಕೆ ಕಡಿಮೆಯಾಗುತ್ತದೆ ಎನ್ನುವ ಟೀಕಾಕಾರರ ಬಾಯಿ ಮುಚ್ಚಿಸುವಂತೆ ಕರೀನಾ ಮತ್ತೆ ತಯಾರಾಗಿದ್ದಾಳೆ. ಅದೂ ತನಗಿಂತ ಕಡಿಮೆ ವಯಸ್ಸಿನ ಹೀರೋಗಳ ಜತೆಗೇ ಹೆಚ್ಚು ಚಿತ್ರಗಳನ್ನು ಒಪ್ಪಿಕೊಂಡಿದ್ದಾಳೆ.

ಅಕ್ಷಯ ಕುಮಾರ್– ಕರೀನಾ ಜೋಡಿಯ 'ಗುಡ್ ನ್ಯೂಸ್' ಕೊನೆಯ ಹಂತದಲ್ಲಿದೆ. ಧರ್ಮ ಪ್ರೊಡಕ್ಷನ್‌ನ ಈ ಚಿತ್ರದ ಸೆಪ್ಟೆಂಬರ್‌ನಲ್ಲಿ ತೆರೆಗೆ ಬರಲಿದೆ. ಬಾಲಿವುಡ್‌ನಲ್ಲಿ ಭಾರೀ ಯಶಸ್ಸು ಕಂಡ 'ಹಿಂದಿ ಮೀಡಿಯಂ' ಚಿತ್ರದ ಎರಡನೇ ಭಾಗ 'ಅಂಗ್ರೇಜಿ ಮೇಡಂ' ಶೂಟಿಂಗ್ ನಡೆದಿದೆ. ಕ್ಯಾನ್ಸರ್ ಚಿಕಿತ್ಸೆಗಾಗಿ ಅಮೆರಿಕಕ್ಕೆ ಹೋಗಿ ಗುಣವಾಗಿ ಬಂದ ಇರ್ಫಾನ್ ಖಾನ್ ಈ ಚಿತ್ರದ ಹೀರೊ. ಆತನಿಗೆ ಜೊತೆಯಾಗಿ ನಟಿಸುತ್ತಿರುವ ಕರೀನಾ 'ಇದು ನನ್ನ ವೃತ್ತಿಜೀವನದ ವಿಭಿನ್ನ ಚಿತ್ರ' ಎಂದಿದ್ದಾಳೆ.

ಕರಣ್ ಜೋಹರ್ ನಿರ್ಮಾಪಕ ಮತ್ತು ನಿರ್ದೇಶಕನಾಗಿರುವ 'ತಖ್ತ್' ಚಿತ್ರ ಈಗಾಗಲೆ ಸುದ್ದಿಯಲ್ಲಿದೆ. ಈ ಚಿತ್ರದಲ್ಲಿ ಕರೀನಾ ಜೊತೆಗೆ ರಣ್‌ವೀರ್ ಸಿಂಗ್ ಮತ್ತು ಅಲಿಯಾ ಭಟ್ ನಟಿಸುತ್ತಿದ್ದಾರೆ. ವಿಕಿ ಕೌಶಲ್, ಅನಿಲ್ ಕಪೂರ್, ಜಾಹ್ನವಿ ಕಪೂರ್– ಹೀಗೆ ದೊಡ್ಡ ತಾರಾಗಣವಿರುವ ಈ ಚಿತ್ರದಲ್ಲಿ ಕರೀನಾ ಪಾತ್ರಕ್ಕೆ ಹೆಚ್ಚು ಮಹತ್ವವಿದೆಯಂತೆ.

ಈ ಮಧ್ಯೆ ಲಗಾನ್ ಖ್ಯಾತಿಯ ಸ್ಟಾರ್ ನಿರ್ದೇಶಕ ಅಶುತೋಷ್ ಗೋವರಿಕರ್ ನಿರ್ದೇಶನದ ಹೊಸ ಚಿತ್ರಕ್ಕೆ ಕರೀನಾ ಮೊದಲ ಆಯ್ಕೆ ಎಂದು ಸುದ್ದಿ ಹಬ್ಬಿದೆ. ಮರಾಠಿಯಲ್ಲಿ ನಾನಾ ಪಾಟೇಕರ್ ನಟಿಸಿ ಯಶಸ್ವಿಯಾದ 'ಆಪ್ಲಾ ಮನುಸ್' ಚಿತ್ರದ ಹಿಂದಿ ರಿಮೇಕ್ ಇದು. ಒಟ್ಟಾರೆ ಕರೀನಾ ಯಾವ ಹೊಸ ನಟಿಯರಿಗೂ ಕಡಿಮೆಯಿಲ್ಲದಂತೆ ಬ್ಯುಸಿ ಆಗಿದ್ದಾಳೆ.

■ ಬಿಂದು

